## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ.451 /2024

ಸಾಕ್ಷಿಗೆ ದಿನಾಂಕ 21-11-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 01 P.W.: 03

| | | |
|---|---|---|
| ಹೆಸರು | : | ಧನಂಜಯ ಎಂ |
| ತಂದೆಯ ಹೆಸರು | : | ನಾಗಯ್ಯ ಸ್ವಾಮಿ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಪಿಎಸ್ ಐ |
| ವಾಸ ಸ್ಥಳ | : | ಹನುಮಸಾಗರ ಪೋಲೀಸ್ ಠಾಣೆ ಕೊಪ್ಪಳ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 14-04-2022 ರಿಂದ 28-06-2024 ರವರೆಗೆ ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 06.03.2024 ರಂದು ನಾನು ಹೊಸಕೇರೆ ಗ್ರಾಮದಲ್ಲಿ ಇನ್ನೊಂದು ಪ್ರಕರಣದ ದಾಳಿಯ ಕುರಿತು ಇದ್ದಾಗ ನನಗೆ ಮಾಹಿತ ಬಂದಿರುತ್ತದೆ. ಅದರ ವಿವರ ಎನೆಂದರೆ ಹೊಸರಕೇರೆ ಗ್ರಾಮದಲ್ಲಿ ನಾಗರಾಜ ಎನ್ನುವವರ ಅಂಗಡಿಯ ಮುಂದೆ ಸಾರ್ವಜನಿಕ ರಸ್ತೆಯಲ್ಲಿ ಬೀದಿ ದೀಪದ ಕೇಳಗೆ ಕೂತು ಒಬ್ಬ ವ್ಯಕ್ತಿ ಮಟಕ ನಂಬರನ್ನು ಬರೆಯುವ ಜೂಜಾಟವನ್ನು ಆಡಿಸುತ್ತಿದ್ದಾನೆ ಅನ್ನುವುದು ಆಗಿರುತ್ತದೆ. ಸಂಜೆ 6-55 ಗಂಟೆಗೆ ನಾನು ಸ್ಥಳದಕ್ಕೆ ನನ್ನ ಜೊತೆ ಇದ್ದ ಚಾಸಾ 2 ಮತ್ತು 3 ಪಂಚರು ಮತ್ತು ನಮ್ಮ ಸಿಬ್ಬಂದಿಗಳಾದ ಚಾಸ 4 ರಿಂದ 6 ರವರ ಜೊತೆ ದಾಳಿ ಮಾಡಿರುತ್ತೇನೆ. ಅಲ್ಲಿ ಒಬ್ಬ ವ್ಯಕ್ತಿ ಮಟಕಾ ಜೂಜಾಟದ ಅಂಕೆ ಸಂಖ್ಯೆಯನ್ನು ಬರೆಯುತ್ತಿದ್ದನು ಮತ್ತು 1 ರೂ ಗೆ 80 ರೂ ಕೊಡುತ್ತೇನೆ ಅಂತಾ ಚೀಟಿಯಲ್ಲಿ ನಂಬರು ಬರೆದು ಕೊಡುತ್ತಿದ್ದನು. ನಾವು ದಾಳಿ ಮಾಡಿದ ತಕ್ಷಣ ಅಲ್ಲಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ನಾವು ಅಲ್ಲಿದ್ದ ಆರೋಪಿಯನ್ನು ವಶಕ್ಕೆ ಪಡೆದು ಅವನ ಹೆಸರನ್ನು ವಿಚಾರಿಸಲಾಗಿ ಅವನು ತನ್ನ ಹೆಸರು ಅಂಗಡಿ ನಾಗರಾಜ ಅಂತಾ ತಿಳಿಸಿದನು. ನಾವು ಅವನನ್ನು ತಪಾಸಣೆ ಮಾಡಲಾಗಿ ಅವನ ಬಳಿ 1670/- ರೂ ನಗದು ಹಣ ಇತ್ತು ಒಂದು ಮಟಕಾ ಪಟ್ಟಿ ಮತ್ತು ಒಂದು ಬಾಲ್ ಪೆನ್ ಇತ್ತು. ಅವುಗಳನು ಪಂಚರ ಸಮ್ಮುಖದಲ್ಲಿ ಅಮಾನತು ಪಡಿಸಿಕೊಳ್ಳಲಾಯಿತು. ಪಂಚನಾಮೆಯನ್ನು ಸಂಜೆ 7-00 ರಿಂದ 7-45 ಗಂಟೆವರೆಗೆ ಕೃತ್ಯ ಸ್ಥಳದಲ್ಲಿ ತಯಾರಿಸಲಾಯಿತು. ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ ಅದಕ್ಕೆ ನಾನು ಸಹಿ ಮಾಡಿದ್ದೇನೆ, ಸಾಕ್ಷಿಯು ನಿಪಿ 1 ರಲ್ಲಿ ತನ್ನಸಾಕ್ಷಿ ಇದೆ ಎಂದು ನೋಡಿ ಗುರುತಿಸಿದ್ದು ಅದನ್ನು ನಿಪಿ 1ಬಿ ಅಂತಾ ಗುರುತಿಸಲಾಯಿತು. ಮಟಕಾ ಪಟ್ಟಿ, ಪೆನ್ ಮತ್ತು 1670/- ರೂ ನಗದನ್ನು ನಾನು ನೋಡಿದರೆ

ಗುರುತಿಸುತ್ತೇನೆ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಮಟಕಾ ಪಟ್ಟಿಯನ್ನು ಮು ಮಾ ೧, ಪೆನ್ ಅನ್ನು ಮೂ ಮಾ ೨, ನಗದನ್ನು ಮೂ ಮಾ ೩ ಎಂದು ಗುರುತಿಸಲಾಯಿತು. ಆರೋಪಿತನನ್ನು ನೋಡಿದರೆ ನಾನು ಗುರುತಿಸುತ್ತೇನೆ. ಅವನು ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ. ಆರೋಪಿತ, ಮುದ್ದೆ ಮಾಲು ಮತ್ತು ಪಂಚನಾಮೆ ಸಮೇತ ಠಾಣೆಗೆ ಹಾಜರಾಗಿ ನಾನು ಠಾಣೆಯಲ್ಲಿ ಎಸ್ ಹೆಚ್ ಓ ಅವರ ಮುಂದೆ ಆರೋಪಿತನ ವಿರುದ್ಧ ಸರಕಾರದ ಪರವಾಗಿ ದೂರು ನೀಡಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ ೨ ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ ೨ ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು. ಆರೋಪಿ ಪರ ಬಿಬಿ ಆರ್ ವಕೀಲರಿಂದಃ- ಇಲ್ಲ</u>

ನಮ್ಮ ಠಾಣೆಯಿಂದ ಕೃತ್ಯ ಸ್ಥಳ ಸುಮಾರು 10-12 ಕಿಮೀ ಇರುತ್ತದೆ. ನಮ್ಮ ಠಾಣೆಯಿಂದ ಸದರಿ ಸ್ಥಳಕ್ಕೆ ನಮ್ಮ ಇಲಾಖಾ ವಾಹನದಲ್ಲಿ ಹೋಗಲು ಸುಮಾರು 20-25 ನಿಮಿಷ ಬೇಕಾಯಿತು. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಸಾರ್ವಜನಿಕರು ಸಹ ಇದ್ದರು. ನಾವು ಅವರನ್ನು ಹಿಡಿಯಲು ಪ್ರಯತ್ನಿಸಿರುವುದಿಲ್ಲ ಅವರು ಓಡಿಹೋಗಿರುತ್ತಾರೆ. ಸದರಿ ಸ್ಥಳದಲ್ಲಿ ಅಕ್ಕಪಕ್ಕ ನಿವಾಸಿಗಳ ಹೇಳಿಕೆಗಳನ್ನು ನಾನು ಪಡೆದಿಲ್ಲ. ನಾನು ಯಾವುದೇ ದಾಳಿ ಮಾಡಿಲ್ಲ, ಆರೋಪಿತನಿಂದ ಯಾವುದೇ ಮೂಮಾ ಗಳನ್ನು ಅಮಾನತು ಪಡಿಸಿಕೊಂಡಿಲ್ಲ, ಪಂಚನಾಮೆ ಜರುಗಿಸಿಲ್ಲ, ಯಾುವುದೇ ಸ್ಥಳಿಕರ ಹೇಳಿಕೆಪಡಿದಿಲ್ಲ, ಠಾಣೆಯಲ್ಲಿ ಕೂತು ಒಂದು ಸುಳ್ಳು ದೂರನ್ನು ತಯಾರಿಸಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಮಾನತು ಪಡಿಸಿಕೊಂಡಿರುವ ಹಣದಲ್ಲಿ ನೋಟುಗಳ ಮುಖಬೆಲೆಯನ್ನು ನಾನು ದೂರಿನಲ್ಲಿ ಬರೆದಿಲ್ಲ. ನ್ಯಾಯಾಲಯದ ಮುಂದಿರುವ ಮುಮಾಲಿಗು ಆರೋಪಿತನಿಗೂ ಯಾವುದೇ ರೀತಿಯ ಸಂಬಂದ ಇಲ್ಲ ನಮ್ಮ ಠಾಣೆಯ ಅಂಕೆ ಸಂಖ್ಯೆ ಯ ಸಲುವಾಗಿ ಆರೋಪಿತನ ವಿರುದ್ಧ ಸುಳ್ಳು ದೂರು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ